-6-

**ಸಾಕ್ಷಿಗೆ ದಿನಾಂಕಃ26-12-2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**:: ಪಾಟೀ ಸವಾಲು :: ಆರೋಪಿ ಪರ ವಕೀಲರಿಂದ ::**

1. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ವ್ಯವಸಾಯ ಮಾಡುತ್ತಿದ್ದು, ಅದರಿಂದ ನನಗೆ ಆದಾಯ ಇರುತ್ತದೆ. ನಾನು District document writer ಆಗಿರುತ್ತೇನೆ. ಈ ಸಂಬಂಧ ನನಗೆ ಪರವಾನಗಿ ಇರುತ್ತದೆ. ನನ್ನ ವ್ಯವಹಾರಗಳು ಕಾನೂನು ಬದ್ಧವಾಗಿ ಇರಬೇಕು ಎಂದರೆ ಸರಿ. ನನಗೆ ಕಾನೂನು ಬಗ್ಗೆ ತಿಳುವಳಿಕೆ ಇದೆ ಎಂದರೆ ಸರಿ. ಹಣ ವ್ಯವಹಾರ ಮಾಡಬೇಕಾದರೆ ಕಾನೂನು ಬದ್ಧವಾಗಿ ಯಾವ, ಯಾವ ಅಂಶಗಳನ್ನು ತೆಗೆದುಕೊಳ್ಳಬೇಕೆಂದು ನನಗೆ ತಿಳುವಳಿಕೆ ಇರುತ್ತದೆ. ನನ್ನ ಎಲ್ಲಾ ಹಣ ಕಾಸಿನ ವ್ಯವಹಾರಗಳು ರಿಜಿಸ್ಟರ್ ನಲ್ಲಿ ನಮೂದು ಮಾಡಬೇಕೆಂದರೆ ಸಾಕ್ಷಿಯು ಡೀಡ್ ರೈಟಿಂಗ್ ಬಗ್ಗೆ ರಿಜಿಸ್ಟರ್ ನಲ್ಲಿ ನಮೂದು ಮಾಡುತ್ತೇನೆ ನನ್ನ ವೈಯುಕ್ತಿಕ ವ್ಯವಹಾರವನ್ನು ನಮೂದು ಮಾಡುವುದಿಲ್ಲ ಎಂದು ನುಡಿಯುತ್ತಾರೆ.

2. ನನ್ನ ಎಲ್ಲಾ ಆದಾಯ ಮತ್ತು ಹಣಕಾಸಿನ ವ್ಯವಹಾರವನ್ನು ನಾನು ಇನ್ ಕಮ್ ಟ್ಯಾಕ್ಸ್ ರಿಟರ್ನ್ಸ್ ನಲ್ಲಿ ತೋರಿಸಿರುತ್ತೇನೆ ಎಂದರೆ ಸರಿ. ನನಗೆ ಶೃಂಗೇರಿಯಲ್ಲಿ ಒಂದು ಲಾಡ್ಜ್ ಇರುತ್ತದೆ ಎಂದರೆ ಸರಿ. ಲಾಡ್ಜ್ ಇಂದ ಬರುವ ಇನ್ ಕಮ್ ನಾನು ಇನ್ ಕಮ್ ಟ್ಯಾಕ್ಸ್ ರಿಟರ್ನ್ಸ್ ನಲ್ಲಿ ತೋರಿಸುತ್ತೇನೆ. ಆರೋಪಿಯ ಅತ್ತೆ ಆಸ್ತಿಯನ್ನು ನಾನು ಮಾರಿಸಿ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ನಾನು ಸಮ್ಮತಿ ಪತ್ರವನ್ನು ತಯಾರು ಮಾಡಿ ಕೊಟ್ಟಿದ್ದು, ಸದರಿ ಸಮ್ಮತಿ ಪತ್ರಕ್ಕೆ ಆರೋಪಿ, ಆರೋಪಿ ಹೆಂಡತಿ ಹಾಗೂ ಅವರ ತಾಯಿ ನನ್ನ ಮತ್ತು ರಂಗನಾಥ ಹಾಗೂ ವಿಟ್ಟಲ್ ಹೆಗ್ಡೆ ಪರವಾಗಿ ಸಮ್ಮತಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಸಮ್ಮತಿ ಪತ್ರ ದಿಃ01-10-2012 ರಲ್ಲಿ ಆಗಿರುತ್ತದೆ. ಸದರಿ ಪತ್ರವನ್ನು ನಾನು ಹಾಜರು ಪಡಿಸಿರುತ್ತೇನೆ. ಆರೋಪಿಯು ಮತ್ತು ಅವರ ಹೆಂಡತಿ ನನಗೆ ಮುಂಚಿತವಾಗಿ ಪರಿಚಯ ಆಗಿರುವುದಿಲ್ಲ. ಆರೋಪಿತರು ನನಗೆ ತುಂಬಾ ವರ್ಷಗಳಿಂದ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2012 ರಿಂದ -

ಆರೋಪಿಯು ಪರಿಚಯ ಇರುತ್ತಾರೆ ಎಂದು ನುಡಿದಿರುತ್ತಾರೆ. ನಾನು ವೈಯುಕ್ತಿಕವಾಗಿ ವ್ಯವಹಾರ ಮಾಡಿದರೆ, ಕಾನೂನು ಪ್ರಕಾರ, ಆಧಾರ್ ಕಾರ್ಡ್, ಐ.ಡಿ ಕಾರ್ಡ್ ಪಡೆದುಕೊಳ್ಳುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ನಾನು ಹಣ ಕಾಸಿನ ವ್ಯವಹಾರ ಮಾಡುವಾಗ ಯಾವ ಯಾವ ದಾಖಲೆಗಳನ್ನು ಪಡೆದುಕೊಳ್ಳುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಹಣ ಕಾಸು ವ್ಯವಹಾರ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ನಾನು ಯಾರಿಗಾದರೂ ಸಾಲ ಕೊಡಬೇಕೆಂದರೆ ನಾನು ಡೀಡ್ ರೈಟರ್ ಆಗಿದ್ದರಿಂದ ಯಾವ ಯಾವ ದಾಖಲೆಗಳು ಪಡೆದುಕೊಳ್ಳಬೇಕು ಎಂದು ನನಗೆ ತಿಳಿದಿರುತ್ತದೆ ಎಂದರೆ ಸಾಕ್ಷಿಯು ನಾನು ಹಣ ಕಾಸಿನ ವ್ಯವಹಾರ ಮಾಡುವುದಿಲ್ಲ, ಸಾಲ ಕೊಡುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸಾಲವನ್ನು ಯಾರಿಗೆ ಕೊಟ್ಟಿರುತ್ತೇನೆಂದು ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿ ಮತ್ತು ಅವರ ಗಂಡ ಇಬ್ಬರೂ ಬಂದಿದ್ದು, ಅವರು ಹೇಳಿದ್ದಂತೆ ಆರೋಪಿಯ ಖಾತೆಗೆ ಜಮಾ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ.

3. ಸಮ್ಮತಿ ಪತ್ರಕ್ಕೆ ಆರೋಪಿಯ ಅತ್ತೆಗೆ ನಾವು ಯಾವುದೇ ಹಣ ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು, ಸಮ್ಮತಿ ಪತ್ರಕ್ಕೆ ಯಾವುದೇ consideration ಇರುವುದಿಲ್ಲ ಮತ್ತು ಪತ್ರದಲ್ಲಿ ತೋರಿಸುವುದೂ ಇಲ್ಲ ಎಂದು ನುಡಿಯುತ್ತಾರೆ. ನಾನು ದೂರಿನಲ್ಲಿ ತೋರಿಸಿರುವ ಹಣವು ಆರೋಪಿಯ ತಾಯಿಗೆ ಸಮ್ಮತಿ ಪತ್ರಕ್ಕಾಗಿ ಹಣ ಆಗಿರುತ್ತದೆ ಎಂದರೆ ಸರಿಯಲ್ಲ. ದೂರಿನಲ್ಲಿ ತೋರಿಸಿರುವ ಶೇಕಡ 10 ರಷ್ಟು ಬಡ್ಡಿಗೆ ಸಂಬಂಧಿಸಿ ಯಾವುದೇ ದಾಖಲೆಯನ್ನು ಹಾಜರು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಮೌಖಿಖವಾಗಿ ಆರೋಪಿತರು ಒಪ್ಪಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮತ್ತು ಆರೋಪಿತರ ಮಧ್ಯೆ ಸಾಲದ ಕರಾರು ಪತ್ರ ಆಗಿರುವುದಿಲ್ಲ ಎಂದರೆ ಸರಿ. ನಾನು ಆರೋಪಿಯ ಹೆಂಡತಿಗೆ ನೀಡಿರುವ 20 ಲಕ್ಷ ಹಣವು ಸಾಲದ ರೂಪದಲ್ಲಿ ನೀಡಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿರುವುದಿಲ್ಲ. ಆರೋಪಿಯ ಹೆಂಡತಿ ನನಗೆ ಹಣ ಜಮಾ ಮಾಡಿರುವ ಬಗ್ಗೆ ನಾನು ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು 2010-11 ರಲ್ಲಿ ಆರೋಪಿತರು ನನಗೆ ಪರಿಚಯ ಆಗಿದ್ದು, ಆಗಾಗ ನನ್ನಿಂದ ಹಣ-

ಪಡೆದುಕೊಳ್ಳುತ್ತಿದ್ದರು ಮತ್ತು ಅದನ್ನು ಹಿಂತಿರುಗಿಸುತ್ತಿದ್ದರು, ಈ ಪ್ರಕರಣಕ್ಕೆ ಸದರಿ ವ್ಯವಹಾರ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ಸಾಲಕ್ಕಾಗಿ ಪರಿಚಯ ಆಗಿರುವುದಿಲ್ಲ ನನಗೆ ದೇವಸ್ಥಾನಕ್ಕೆ ಕರೆದುಕೊಂಡು ಹೋಗುವಾಗ ಪರಿಚಯ ಆಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿತರ ಹಳೆ ವ್ಯವಹಾರದ ಬಗ್ಗೆ ನಾನು ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ.

4. ರೂ.20,00,000/- ಲಕ್ಷ ಇಂತಹವರ ಖಾತೆಗೆ ಜಮಾ ಆಗಿರುತ್ತದೆ ಎಂದು ಯಾವುದೇ ದಾಖಲೆ ಹಾಜರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಬ್ಯಾಂಕ್ ನ ಖಾತೆ ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಸದರಿ ಮೊತ್ತವು ಆರೋಪಿಯ ಹೆಂಡತಿಯ ಖಾತೆಗೆ ಜಮಾ ಆಗಿರುತ್ತದೆ. ಆರೋಪಿಯ ಹೆಂಡತಿಯ ಖಾತೆಯಿಂದ ನನ್ನ ಖಾತೆಗೆ ಹಣ ಜಮಾ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಸದರಿ ಪ್ರಕರಣಕ್ಕೆ ಸಂಬಂಧಿಸಿದ್ದಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಹಳೆ ವ್ಯವಹಾರಕ್ಕೆ ಎಷ್ಟು ಹಣ ನನ್ನ ಖಾತೆಗೆ ಜಮಾ ಆಗಿರುತ್ತದೆ ಎಂದು ನಾನು ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು 1 ಲಕ್ಷ ಹಣವನ್ನು ಕೈ ಸಾಲ ಕೊಟ್ಟಿರುವುದಾಗಿ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ಯಾರಿಗೆ ಸದರಿ ಹಣವು ಸಂದಾಯ ಆಗಿರುತ್ತದೆ ಎಂದು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ನಾನು ದೂರಿನಲ್ಲಿ ತೋರಿಸಿರುವ 5 ಲಕ್ಷ ಆರೋಪಿಗೆ ಸಂದಾಯ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿ ಹೇಳಿದಂತೆಯೇ ಆರೋಪಿಯ ಹೆಂಡತಿಯ ಖಾತೆಗೆ ಜಮಾ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿ ಫೋನ್ ಮೂಲಕ ನನಗೆ ಕರೆ ಮಾಡಿ, ಹಣ ಜಮಾ ಮಾಡುವಂತೆ ಹೇಳಿರುವ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಈ ಸಂಬಂಧ ನಾನು ಸದರಿ ವಿಚಾರವನ್ನು ದೂರಿನಲ್ಲಾಗಲೀ, ಪ್ರಮಾಣ ಪತ್ರದಲ್ಲಾಗಲೀ ತಿಳಿಸಿರುವುದಿಲ್ಲ ಎಂದರೆ ಸರಿ.

**(ಮುಂದುವರಿದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.